ದಿನೇದಿನೇ ಬಿಗಡಾಯಿಸುತ್ತಿತ್ತು. ಆ ಕೋಣೆಯಲ್ಲಿ ಒಂದು ಮಂಚವಿದ್ದು, ಅದರ ಮೇಲೆ ಒಂದು ಜಮಖಾನವನ್ನು ಹಾಸಲಾಗಿತ್ತು. ಹರಿಲಾಲನ ಬಳಿ ಎರಡುಮೂರು ಜೋಡಿ ಕೊಳಕು ಬಟ್ಟೆಗಳು ಹಾಗೂ ಒಂದು ಶಾಲಿತ್ತು. ತುಲಸೀರಾಮರು ಔಷಧಿಗೆ ವ್ಯವಸ್ಥೆಯನ್ನು ಮಾಡಿದ್ದರು. ವೈದ್ಯರು ಔಷಧಿ ಕೊಡುತ್ತಿದ್ದರು, ಆದರೆ ಪೇಟೆಂಟ್ ಔಷಧಿಗೆ ಚೀಟಿಯನ್ನು ಬರೆದು ಕೊಟ್ಟಾಗ ಅದನ್ನು ಕೊಳ್ಳಲು ಅವನ ಬಳಿ ಬಿಡಿಗಾಸೂ ಸಹ ಇರಲಿಲ್ಲ. ಜ್ವರ ಕಡಿಮೆಯಾಗುತ್ತಿರಲಿಲ್ಲ. ಅವನು ಅದೆಷ್ಟೋ ಬಾರಿ ದೇಹಾಲಸ್ಯದಿಂದ ಗಂಟೆಗಟ್ಟಲೆ ನಿದ್ರಿಸುತ್ತಿದ್ದ. ಆಗ ಮೆದುಳು ಸಿಡಿದಂಥ ಅನುಭವವಾಗುತ್ತಿತ್ತು. ಮನಸ್ಸಿನ ಕುದುರೆ ತೀವ್ರ ಗತಿಯಲ್ಲಿ ದೌಡಾಯಿಸುತ್ತಿತ್ತು.

ಹರಿಲಾಲನನ್ನು ಪರೀಕ್ಷಿಸಿದ ವೈದ್ಯರು, ‘ಔಷಧಿಗಳಿಂದ ಕಾಯಿಲೆ ವಾಸಿಯಾಗಲು ತುಂಬಾ ದಿನಗಳು ಹಿಡಿಯುತ್ತವೆ. ಚೀಟಿಯಲ್ಲಿ ಬರೆದ ಔಷಧಿಗಳನ್ನು ಸೇವಿಸುತ್ತಿರಲಿ, ಆದರೆ ನಿಶ್ಶಕ್ತಿ ಹೆಚ್ಚುತ್ತಲೇ ಇರುವುದು, ಅದಕ್ಕೇ ಗ್ಲೂಕೋಸ್ ಮತ್ತು ಮೋಸಂಬಿಗಳನ್ನು ಸೇವಿಸುತ್ತಿರಲಿ’ ಎಂದು ಸಲಹೆಯಿತ್ತರು. ವೈದ್ಯರ ಮಾತನ್ನು ಕೇಳಿ ಹರಿಲಾಲನಿಗೆ ಗಾಬರಿಯಾಯಿತು. ವೈದ್ಯರ ಚೀಟಿ ಹಿಡಿದು ಕೋಣೆಯವರೆಗೆ ಹೋದ, ಆದರೆ ಅಲ್ಲಿಗೆ ಹೋಗುತ್ತಲೇ ಕುಸಿದು ಬಿದ್ದ. ಗಂಟಲು ಒಣಗುತ್ತಿತ್ತು, ನೀರಿನ ಮಡಿಕೆಯ ಸಮೀಪಕ್ಕೆ ಹೋಗಿ ಎರಡು ಗುಟುಕು ನೀರು ಕುಡಿಯುವಷ್ಟೂ ಶಕ್ತಿ ಇರಲಿಲ್ಲ. ಜ್ವರ ತೀವ್ರವಾಗಿ ಏರಿತ್ತು. ಯಾರಾದರು ಬಂದು ಚಹಾ ಕುಡಿಸುವಷ್ಟು ಸಹ ಅವನಲ್ಲಿ ಅನುಕೂಲವಿರಲಿಲ್ಲ. ಅವನು ತನ್ನ ಕೊಳಕು ಬಟ್ಟೆಗಳನ್ನು ನೋಡುತ್ತಾ ಜ್ವರದಲ್ಲಿ ಶರೀರವನ್ನು ಮುದುಡಿ ಕೂತಿದ್ದ. ತುಲಸೀರಾಮರು ಕೊಟ್ಟ ಹಣ ಆರಂಭದಲ್ಲಿಯೇ ಖರ್ಚಾಗಿದ್ದವು. ಈಗ ಹೊಸದಾಗಿ ಬೇರೆ ವ್ಯವಸ್ಥೆಯಾಗುವವರೆಗೆ, ಏನೂ ಸಾಧ್ಯವಿರಲಿಲ್ಲ. ವೈದ್ಯರು ಮೋಸಂಬಿ, ಗ್ಲೂಕೋಸ್ ಮತ್ತು ಔಷಧಿಗಳ ಲಿಸ್ಟ್ ಅನ್ನು ಕೊಟ್ಟಿದ್ದರು. ಆದರೆ ಹರಿಲಾಲ ಈಗ ಆ ಚೀಟಿಯನ್ನು ಮುಷ್ಟಿಯಲ್ಲಿ ಹಿಡಿದು ಕೋಣೆಯ ಬಾಗಿಲ ಬಳಿಯೇ ಬಿದ್ದಿದ್ದ.

ಹರಿಲಾಲ ಅಲ್ಲಿ ತುಂಬಾ ಹೊತ್ತು ಹೀಗೆ ಬಿದ್ದಿರಲು ಸಾಧ್ಯವಿರಲಿಲ್ಲ. ಜ್ವರವಂತೂ ಕಡಿಮೆಯಾಗುತ್ತಿರಲಿಲ್ಲ. ಅವನು ಸರಿಯಾಗಿ ಊಟವನ್ನು ಮಾಡದೆ ಅದೆಷ್ಟೋ ದಿನಗಳಾಗಿದ್ದವು, ಹೀಗಾಗಿ ನಿಶ್ಶಕ್ತಿ ಕಾಡುತ್ತಿತ್ತು. ಹೊಟ್ಟೆಯಲ್ಲಿ ಭಯಾನಕ ಮುರಿತದ ಅನುಭವವಾಗುತ್ತಿತ್ತು. ಕೋಣೆಯಲ್ಲಿ ಕೊಳಕು ತುಂಬಿತ್ತು, ಕೊಳಕು ಬಟ್ಟೆಗಳಿಂದ ದುರ್ನಾತ ಬಡಿಯುತ್ತಿತ್ತು. ಅವನ ಶರೀರದಿಂದ ಬೆವರು ಹರಿಯುತ್ತಿತ್ತು. ಈಗ ಕೋಣೆಯ ಸ್ವಚ್ಛತೆ ಮಾಡುವುದು ಅಗತ್ಯವಾಗಿತ್ತು, ಅದರೊಂದಿಗೆ ಗ್ಲೂಕೋಸ್ ಮತ್ತು ಮೋಸಂಬಿ ಹಣ್ಣುಗಳನ್ನು ಸೇವಿಸಿದ್ದರೆ ಸ್ವಲ್ಪ ಸುಧಾರಿಸಿಕೊಳ್ಳಬಹುದಿತ್ತು.

ಅಕಸ್ಮಾತ್ ಹರಿಲಾಲನ ಕಿವಿಗಳಿಗೆ ಹಿಂದಿನ ಗಲ್ಲಿಯಲ್ಲಿ ಕಸ ಗುಡಿಸುವ ಶಬ್ದ ಕೇಳಿದಂತಾಯಿತು. ನೌಕರನೊಬ್ಬ ಸ್ವಚ್ಛತೆಯನ್ನು ಮಾಡುತ್ತಿದ್ದ. ಹರಿಲಾಲ ಕಣ್ಣುಗಳನ್ನು ತೆರೆದ. ಅವನ ಯೋಚನೆ ನಿಜವಾಗಿತ್ತು. ಹದಿನೇಳುಹದಿನೆಂಟರ ಯುವಕನೊಬ್ಬ ಗಲ್ಲಿಯನ್ನು ಗುಡಿಸಿ ಕಸವನ್ನು ಒಟ್ಟು ಮಾಡುತ್ತಿದ್ದ. ಹರಿಲಾಲ ಹೇಗೋ ಮಾಡಿ ಎದ್ದು ನಿಂತು, ಆ ಹುಡುಗನನ್ನು ತನ್ನ ಬಳಿಗೆ ಕರೆಸಿಕೊಂಡ.

‘ಕಾಂಪೌಂಡಿನಲ್ಲಿ ಕಸ ಗುಡಿಸುವುದು ನನ್ನ ಕೆಲಸವಲ್ಲ, ಬಾಬೂಜಿ’ ಯುವಕ ಸಮೀಪಕ್ಕೆ ಬಂದು ಹೇಳಿದ, ‘ಅದಕ್ಕೆ ನಿಮ್ಮ ಮನೆಯ ಮಾಲೀಕರಿಗೆ ಹೇಳಿ.’

‘ನಾನು ಕಸವನ್ನು ಗುಡಿಸಿಕೊಳ್ಳಬೇಕಿಲ್ಲಪ್ಪ’ ಹರಿಲಾಲ ಕಾತುರದಿಂದ ಹೇಳಿದ, ‘ಇಲ್ಲಿ ಸ್ವಲ್ಪ ಬಾ...ತಗೋ, ಈ ಕೋಟು, ಪ್ಯಾಂಟು ಮತ್ತು ಶರ್ಟು...ನಿನ್ನ ಉಪಯೋಗಕ್ಕೆ ಬರುತ್ತದೆ... ಇಟ್ಟುಕೋ...ಇದಕ್ಕೆ ನಿನಗೇನು ತೋಚತ್ತೋ, ಅಷ್ಟು ದುಡ್ಡು ಕೊಡು...’ ಹರಿಲಾಲ ಗೂಟಕ್ಕೆ ನೇತು ಹಾಕಿದ್ದ ಬಟ್ಟೆಗಳೆಡೆಗೆ ಸಂಜ್ಞೆ ಮಾಡಿದ.

ಕಸ ಗುಡಿಸುವ ಹುಡುಗನಿಗೆ ಕೊಳ್ಳುವ ಈ ಆಫರ್ ಒಮ್ಮೆಲೆ ಅನಪೇಕ್ಷಿತವಾಗಿತ್ತು. ಜನ ಅವನಿಗೆ ಅದೂಇದೂ ವಸ್ತುಗಳನ್ನು ಪುಕ್ಕಟೆ ಕೊಡುತ್ತಿದ್ದರು. ಆದರೆ ಇಂದು ಗೂಟಕ್ಕೆ ನೇತು ಹಾಕಿದ್ದ ತನ್ನ ಬಟ್ಟೆಗಳನ್ನು ಮಾರಿ ಬಿಡಿಕಾಸು ಯಾಚಿಸುವ ವ್ಯಕ್ತಿಯನ್ನು ಅವನೆಂದೂ ನೋಡಿರಲಿಲ್ಲ. ಅವನು ಬೆರಗಾಗಿ ಹರಿಲಾಲನನ್ನೇ ನೋಡಿದ.

‘ನಾನು ನಿಜವನ್ನೇ ಹೇಳುತ್ತಿದ್ದೇನಪ್ಪ,’ ಹರಿಲಾಲ ದೈನ್ಯತೆಯಿಂದ ಹೇಳಿದ, ‘ಇದು ಉಣ್ಣೆಯ ಕೋಟು...ಹೊಸದಾಗಿಯೇ ಇದ್ದಂತಿದೆ...ತೋಳಿನ ಬಳಿ ಸ್ವಲ್ಪ ಸವೆದಿದೆ, ಅಲ್ಲಿಗೆ ತೇಪೆ ಹಾಕಿದರೆ ಚೆನ್ನಾಗಿ ಕಾಣಿಸುತ್ತದೆ...ತಗೋತಗೋ...ನಿನಗೆ ಎಷ್ಟು ಕೊಡಬೇಕೆಂದು ಅನ್ನಿಸುವುದೋ, ಅಷ್ಟು ಕೊಡು...’

‘ಬಾಬೂಜಿ, ಇದೇನು ಹೇಳುತ್ತಿದ್ದೀರ...? ನಿಜವಾಗಿಯೂ...’ ಕಸ ಗುಡಿಸುವ ಹುಡುಗನಿಗೆ ಈಗಲೂ ಸಹ ವಿಶ್ವಾಸ ಬರುತ್ತಿರಲಿಲ್ಲ.

ಹರಿಲಾಲ ಮೆಲ್ಲನೆ ಎದ್ದು ಗೋಡೆಯ ಆಸರೆ ಹಿಡಿದು ನಿಂತ. ಗೂಟದಿಂದ ಮೂರೂ ಬಟ್ಟೆಗಳನ್ನು ತೆಗೆದು ಹುಡುಗನ ಎದುರಿಗಿಟ್ಟ. ಹುಡುಗ ಇನ್ನೂ ತನ್ನ ಕೈಯನ್ನು ಚಾಚಿರಲಿಲ್ಲ.

‘ನೋಡಪ್ಪ, ಇದಕ್ಕೆ ಬದಲಾಗಿ ನನಗೆ ನಗದು ಹಣ ಬೇಕಿಲ್ಲ...ಒಂದರ್ಧ ಡಜನ್ ಮೋಸಂಬಿ, ಒಂದು ಗ್ಲೂಕೋಸ್ ಪೊಟ್ಟಣ, ಒಂದೆರಡು ಔಷಧಿಗಳನ್ನು ತಂದು ಕೊಡು...ನನ್ನ ಆರೋಗ್ಯ ಸರಿಯಿಲ್ಲ...ನನ್ನ ಮೇಲೆ ಇಷ್ಟು ದಯೆತೋರು...’

ಕಸ ಗುಡಿಸುವ ಹುಡುಗ ಆಶ್ಚರ್ಯದಿಂದ ನಿಂತಲ್ಲೇ ನಿಂತ. ಅವನು ಹರಿಲಾಲನ ಕೈಯಿಂದ ಬಟ್ಟೆಗಳನ್ನು ತೆಗೆದುಕೊಂಡ, ಪೊರಕೆಯನ್ನು ಅಲ್ಲಿಯೇ ಬಿಟ್ಟು ಓಡಿ ರಸ್ತೆಗೆ ಹೋದ. ಸ್ವಲ್ಪ ಹೊತ್ತಿಗೆ ಅವನು ಮರಳಿ ಬಂದಾಗ ಹರಿಲಾಲ ಅರೆಪ್ರಜ್ಞಾವಸ್ಥೆಯಲ್ಲಿದ್ದ. ಹುಡುಗ ಅವನೆದುರು ಮೋಸಂಬಿ, ಗ್ಲೂಕೋಸ್ ಮತ್ತು ಔಷಧಿಗಳನ್ನು ಇಟ್ಟು ತನ್ನ ಕೆಲಸಕ್ಕೆ ಹೊರಟು ಹೋದ.

ಹರಿಲಾಲನಿಗೆ ಎಚ್ಚರವಾದಾಗ ನೋಡಿದ ಔಷಧಿಯ ಬಾಟಲು, ಮೋಸಂಬಿ...ಗ್ಲೂಕೋಸ್... ಅವನು ಮೆಲ್ಲಮೆಲ್ಲನೆ ನಿಂತು ಔಷಧಿಯನ್ನು ಸೇವಿಸಿದ...ಗ್ಲೂಕೋಸ್ ನೀರನ್ನು ಕುಡಿದ... ಮೋಸಂಬಿಯನ್ನು ತಿಂದ. ಸ್ವಲ್ಪ ಹಿತವೆನಿಸಿತು. ಕರ್ಚೀಫನ್ನು ನೀರಿಗದ್ದಿ ಹಣೆಯ ಮೇಲಿಟ್ಟು ಕೊಂಡ. ಈಗ ಅವನಿಗೆ ನಿದ್ರೆ ಬಂತು.

* * *

ಎಚ್ಚರವಾದಾಗ ಶರೀರ ಸ್ವಲ್ಪ ಹಗುರವಾಗಿದೆ ಎಂದು ಕಂಡಿತು. ಜ್ವರ ಸ್ವಲ್ಪ ಕಡಿಮೆಯಾಗಿತ್ತು. ಆದರೆ ಈಗ ಅವನಿಂದ ಒಂಟಿತನ ಮತ್ತು ಅಸಹಾಯಕತೆಯನ್ನು ಸಹಿಸಲಾಗುತ್ತಿರಲಿಲ್ಲ. ಅಲೆದಾಟದಿಂದಲೂ ದಣಿದಿದ್ದ. ತನ್ನ ಪರಿವಾರದಿಂದ ದೂರವಾಗಿದ್ದು ತುಂಬಾ ದಿನಗಳಾಗಿದ್ದವು. ಪರಿವಾರದ ಕೊರತೆ ಅವನನ್ನು ದಿನೇ ದಿನೇ ಕಾಡುತ್ತಿತ್ತು. ಈಗ ಅವನಿಗೆ, ಯಾವ ಮಾರ್ಗವನ್ನು ತಾನು ಇಷ್ಟಪಟ್ಟಿದ್ದನೋ, ಆ ಮಾರ್ಗದಲ್ಲಿ ಇನ್ನು ತಾನು ಒಂಟಿಯಾಗಿ ಸಾಗಲಾರ ಎಂದು ಮನದಟ್ಟಾಗಿತ್ತು. ಅವನ ಶರೀರ ಶಾಶ್ವತ ಆಸರೆಗಾಗಿ ಚೀತ್ಕರಿಸುತ್ತಿತ್ತು. ಅವನ ರೋಮ ರೋಮಗಳು ಒಬ್ಬ ಜೊತೆಗಾರನಿಗಾಗಿ ಹಂಬಲಿಸುತ್ತಿದ್ದವು. ಹೆಂಡತಿಯ ಸಾವಿನ ನಂತರ ಯಾವ ವಿಧದಲ್ಲಿ ಅವನು ಜೀವನವನ್ನು ಸಾಗಿಸಿದ್ದನೋ, ಇನ್ನು ಹಾಗೆ ದಿನಗಳನ್ನು ಕಳೆಯಲು ಸಾಧ್ಯವಾಗುತ್ತಿರಲಿಲ್ಲ.

ಗುಲಾಬಳ ಸ್ನೇಹ ಮತ್ತು ಪ್ರೀತಿಯನ್ನು ಅವನಿಂದ ಮರೆಯಲು ಸಾಧ್ಯವಾಗುತ್ತಿರಲಿಲ್ಲ, ಆದರೆ ಅವಳ ನೆನಪು ಮಾತ್ರದಿಂದ ಬದುಕುವುದು ಕಷ್ಟವಾಗಿತ್ತು. ಒಂದು ವೇಳೆ ತನಗೆ ಹೆಣ್ಣೊಬ್ಬಳ ಜೊತೆ ಸಿಕ್ಕರೆ, ಈ ಮಾನಸಿಕ ಯಾತನೆ ದೂರವಾಗಬಹುದೆಂದು ತೋರಿತು... ಈ ಅಶಾಂತತೆ...ಈ ಅಸಹಾಯಕತೆ...ಈ ಒದ್ದಾಟ...ಈ ನರಳಾಟ...ಈ ಮಾನಸಿಕ ಒತ್ತಡ... ಇವೆಲ್ಲವೂ ಕ್ರಮೇಣ ಕಡಿಮೆಯಾಗಬಹುದು...ನಂತರ ಬಾಪೂ ಅವರ ಇಚ್ಛೆಯಂತೆ ಹಳ್ಳಿಯೊಂದಕ್ಕೆ ಹೋಗಿ ಗ್ರಾಮ ಸುಧಾರಣೆಯ ಕೆಲಸವನ್ನು ಕೈಗೊಂಡು ತನ್ನ ಉಳಿದ ಜೀವನವನ್ನು ಕಳೆಯಬಹುದು...

ರಾಮಿ...ಮನು...ಕಾಂತಿ...ಎಲ್ಲರೂ ಒಟ್ಟಿಗೆ ಮತ್ತೊಮ್ಮೆ...

ಇವರೆಲ್ಲರ ನಡುವೆ ಕಿರೀಟದಂತೆ ಬಡಪಾಯಿ ಬಾ... ಬಾ ಸಹ ತನ್ನೊಂದಿಗೆ ಇದ್ದರೆ...ಇದ್ದರೆ...

ಎರಡು ದಿನಗಳ ನಂತರ ಜ್ವರ ಇಳಿಯಿತು. ಆರೋಗ್ಯದಲ್ಲಿ ಸ್ವಲ್ಪ ಸುಧಾರಣೆ ಕಂಡಿತು. ಹರಿಲಾಲ ತನ್ನಿಚ್ಛೆಯನ್ನು ವ್ಯಕ್ತಪಡಿಸುತ್ತಾ ಬಾಪೂ ಅವರಿಗೆ ಪತ್ರವೊಂದನ್ನು ಬರೆದ.

‘ನಾನು ಒಂಟಿಯಾಗಿ ಜೀವನವನ್ನು ಕಳೆಯುತ್ತಾ ದಣಿದಿದ್ದೇನೆ. ನನ್ನ ಜೀವನಕ್ಕೆ ಸಂಗಾತಿಯ ಅಗತ್ಯವಿದೆ. ನಾನು ಮದುವೆ ಮಾಡಿಕೊಳ್ಳಲು... ಮತ್ತೆ ಸಂಸಾರವನ್ನು ಹೂಡಲು ಬಯಸುತ್ತೇನೆ... ಅಲ್ಲದೆ, ಇನ್ನು ನಾನು ಹಳ್ಳಿಯೊಂದರಲ್ಲಿ ವಾಸ ಮಾಡಿ ಸೇವಾಕಾರ್ಯವನ್ನು ಕೈಗೊಳ್ಳಲು ಬಯಸುತ್ತೇನೆ.’

ಬಾಪೂ ಅವರಿಗೆ ತುಂಬಾ ದಿನಗಳಿಂದ